O.S.4866/2010
PW-1
(Inquiry on prl. Issue No.5)

**ದಿಃ- 22.08.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿಸವಾಲು ಃ ವಾದಿ ಪರ ಶ್ರೀ. ಟಿ.ಎನ್.ಜೆ ವಕೀಲರಿಂದ ಃ**

ಈ ದಾವೆಯ ಸಂಪೂರ್ಣ ಸಂಗತಿಗಳನ್ನು ಮತ್ತು ವಿಷಯಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಮೂಲ ದಾವಾ ಸಂಖ್ಯೆ 929/1991 ನಲ್ಲಿ ನಾವು ಪಕ್ಷಗಾರರಲ್ಲ ಎಂದರೆ ಸರಿ. ಮೂಲ ದಾವಾ ಸಂಖ್ಯೆ 929/1991 ರ ದಾವೆಯ ಎಲ್ಲಾ ಸಂಗತಿ ಮತ್ತು ವಿಷಯಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಈ ದಾವೆಯಲ್ಲಿ ಕರಿಯಪ್ಪ, ಲಕ್ಷ್ಮಯ್ಯ, ಕೃಷ್ಣಪ್ಪ ಮತ್ತು ಕೂಪೇಂದ್ರ ಎನ್ನುವವರು ಪಕ್ಷಗಾರರಾಗಿದ್ದರು ಎಂದರೆ ಸರಿ. ಆದರೆ ಜಯಮ್ಮ, ನಾಗರತ್ನ, ರೂಪ, ಜ್ಯೋತಿಯವರು ಮತ್ತು ಸರಸ್ವತಿ ಪಕ್ಷಗಾರರಾಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಮೂಲ ದಾವಾ ಸಂಖ್ಯೆ 929/1991 ಚಾಲ್ತಿಯಲ್ಲಿರುವಾಗಲೇ ಕರಿಯಪ್ಪ ಮತ್ತು ಲಕ್ಷ್ಮಯ್ಯ ಮೃತಪಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೂಲ ದಾವಾ ಸಂಖ್ಯೆ 929/1991 ನಡೆಯುವಾಗ ಈ ದಾವೆಯ ಬಗ್ಗೆ ನನಗೆ ಗೊತ್ತಿರಲಿಲ್ಲ. ನನಗೆ ಈ ದಾವೆಯ ಬಗ್ಗೆ 2010 ನೇ ಇಸವಿಯಲ್ಲಿ ಟೆಂಡರ್ ನೀಡಿದ ಸಮಯದಲ್ಲಿ ತಿಳಿದುಬಂದಿರುತ್ತದೆ. ಮೂಲ ದಾವಾ ಸಂಖ್ಯೆ 929/1991 ವಾದಿಯಾದ ಕಾಂತಮ್ಮರವರು ಯಾವುದೇ ಸಾಕ್ಷ್ಯವನ್ನು ನೀಡಿಲ್ಲ ಎಂದರೆ ಸಾಕ್ಷಿಯು ಸಾಕ್ಷ್ಯ ನೀಡಿದ ಮೇರೆಗೆ ಅದು ಡಿಕ್ರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿ.ಪಿ.1 ತೋರಿಸಿ ಇದರಲ್ಲಿ ಕಾಂತಮ್ಮನವರು ಸಾಕ್ಷಿ ನೀಡಿಲ್ಲ ಎಂದರೆ ಸಾಕ್ಷಿ ಅದನ್ನು ಪರಾಂಬರಿಸಿ ಹೌದು ಎಂದು ನುಡಿಯುತ್ತಾರೆ ಆದರೆ ಡಿಕ್ರಿಯಾಗಿದೆ ಎಂದು ನುಡಿಯುತ್ತಾರೆ.

ವಾದಿಯವರು ಆ ಪ್ರಕರಣದಲ್ಲಿ ಸಾಕ್ಷ್ಯವನ್ನು ನೀಡದ ಕಾರಣ ಅಭಿಯೋಜನೆ ಮಾಡಿಲ್ಲವೆಂದು ದಾವಾವನ್ನು ವಜಾಗೊಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಯಾವುದೇ ವಾದಿಯು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯವನ್ನು ನೀಡದೇ ಇದ್ದ ಪಕ್ಷದಲ್ಲಿ ಆ ದಾವೆಯು ವಜಾವಾದರೆ ಅದನ್ನು ಅಭಿಯೋಜನೆ ಮಾಡಿಲ್ಲವೆಂದು ನುಡಿಯುತ್ತಾರೆಯೇ ವಿನಃ ಡಿಕ್ರಿ ಅಲ್ಲ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ಆ ಪ್ರಕರಣದ ತೀರ್ಪು ಮತ್ತು ಡಿಕ್ರಿಯು ಕಾನೂನಿನ ಕಣ್ಣಿನಡಿಯಲ್ಲಿ ಶೂನ್ಯವೆನಿಸಿಕೊಳ್ಳುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಪ್ರಸ್ತುತ ಈ ದಾವೆಯ ಮತ್ತು ಮೂಲ ದಾವಾ ಸಂಖ್ಯೆ **929/1991** ರ ತಪಸೀಲಿನ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಕಾಂತಮ್ಮನವರಿಗೆ ಆ ಆಸ್ತಿಯು ಹುಟ್ಟಿನಿಂದ ಬಂದಂತಹ ಹಕ್ಕಿನ ಸ್ವತ್ತು ಎಂದರೆ ಸರಿಯಲ್ಲ. ಅವರಿಗೆ ಬಂದಿರುವಂತಹ ಹಕ್ಕು ಜೀವಿತಾವಧಿಯವರೆಗೂ ಮತ್ತು ಆಕೆಯ ಮರದ ನಂತರ ಆಕೆಯ ವಾರಸುದಾರರಿಗೆ ಮುಂದುವರೆದಂತಹ ಹಕ್ಕನ್ನು ಆಕೆ ಆ ಸ್ವತ್ತಿನಲ್ಲಿ ಪಡೆದಿದ್ದಳು ಎಂದರೆ ಸರಿಯಲ್ಲ. ಆ ಸ್ವತ್ತು ಆಕೆಯ ಹಕ್ಕಿನ ಸ್ವತ್ತಾಗಿದ್ದರಿಂದ ಈ ದಾವೆಯನ್ನು ಮತ್ತೊಮ್ಮೆ ಹಾಕಲು ಅರ್ಹಳು ಎಂದರೆ ಸರಿಯಲ್ಲ. ಆಕೆಯು ಆ ಆಸ್ತಿಯಲ್ಲಿ ತನ್ನ ಹಕ್ಕಿನ ಭಾಗಂಶವನ್ನು ಹೊಂದಿದ್ದರಿಂದ ಆಕೆ ಯಾವಾಗ ಬೇಕಾದರು ತನ್ನ ಭಾಗಾಂಶವನ್ನು ಕೇಳಿ ಸ್ವತ್ತಿನ ವಿಭಾಗಕ್ಕೆ ದಾವೆಯನ್ನು ಸಲ್ಲಿಸಬಹುದು ಎಂದರೆ ಸರಿಯಲ್ಲ. ನಾನು ಪಡೆದಂತಹ ಕ್ರಯ ಪತ್ರಗಳಲ್ಲಿ ವಾದಿಯಾಗಲೀ ಯಾ ಆಕೆಯ ವಾರಸುದಾರರು ಯಾ ಉತ್ತರಾಧಿಕಾರಿಗಳ

ಸಹಿ ಇಲ್ಲ ಎಂದರೆ ಸರಿ. ನನ್ನ ಪ್ರತಿವಾದ ಪತ್ರದಲ್ಲಿ ಎಲ್ಲಿಯೂ ಮೊದಲೇ ನಿರ್ಧರಿತ ಪ್ರಕರಣವೆಂಬ **(res-judicata)** ಬಗ್ಗೆ ಖಂಡಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ.

ಆರ್.ಕೆ.ವೆಂಕಟೇಶ್ ರವರು ಪ್ರತಿವಾದಿ ನಂ.9 ಎಂದರೆ ಸರಿ. ಅವರ ಪ್ರತಿವಾದ ಪತ್ರದಲ್ಲಿ ನಿರ್ಧರಿತ ಪ್ರಕರಣವೆಂಬ ಬಗ್ಗೆ ಉಲ್ಲೇಖ ಹೊರತುಪಡಿಸಿ ಬೇರೆ ಯಾರ ಪ್ರತಿವಾದ ಪತ್ರದಲ್ಲಿಯಾ ಈ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಈ ದಾವಾ ನಡೆದರೆ ಯಾವುದೇ ನಿರ್ಧರಿತ ಪ್ರಕರಣವೆಂಬ ಅಡೆತಡೆಯು ಬರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ತನ್ನ ಪಿತ್ರಾರ್ಜಿತ ಹಕ್ಕಿನ ಮೇರೆಗೆ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

5 ನೇ ವಿವಾದಾಂಶವು ಈ ಪ್ರಕರಣದ ಸಾರಾಂಶಗಳನ್ನು ಪರಿಶೀಲಿಸಿದಾಗ ಅದು ಇದಕ್ಕೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. 5 ನೇ ವಿವಾದಾಂಶವನ್ನು ನ್ಯಾಯಾಲಯವು ಹೊಡೆದು ಹಾಕಿದರೆ ಯಾವುದೇ ಪಕ್ಷಗಾರರಿಗೂ ತೊಂದರೆ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**